ವರ್ತನೆಯನ್ನು ಖಂಡಿಸದೇ ಹೋಗಿರುವುದು ಮಾತ್ರ ಕನ್ನಡ ವಿಮರ್ಶಾಲೋಕದ ಬಗ್ಗೆ ಭ್ರಮನಿರಸನ ಉಂಟಾಗುವಂತೆ ಮಾಡಿದೆ. ಕಾರಣ, ಚಿಲಿ ದೇಶದಲ್ಲಿಯೇ ನೆರೂಡ ಅಶ್ಲೀಲ ವರ್ತನೆಯ ವಿರುದ್ಧ ಪ್ರತಿಭಟನೆಗಳು ನಡೆಯುತ್ತ ಬಂದಿವೆ.

2018ರ ನವೆಂಬರ್‌ನಲ್ಲಿ ಸ್ಯಾಂಟಿಯಾಗೊ ವಿಮಾನ ನಿಲ್ದಾಣಕ್ಕೆ ನೆರೂಡ ಅವರ ಹೆಸರನ್ನು ಮರುನಾಮಕರಣ ಮಾಡಲು ಚಿಲಿಯ ಕೆಳಮನೆಯ ಸಾಂಸ್ಕೃತಿಕ ಸಮಿತಿಯು ಮತ ಚಲಾಯಿಸಿತು. ಆದರೆ ಚಿಲಿ ದೇಶಾದ್ಯಂತ ವಿದ್ಯಾರ್ಥಿನಿಯರ ನೇತೃತ್ವದ ಸ್ತ್ರೀವಾದಿ ಪ್ರತಿಭಟನೆಗಳ ಸರಣಿಯಿಂದ ಉಂಟಾದ ಜಾಗೃತಿಯಿಂದಾಗಿ ನೆರೂಡ ಬಗ್ಗೆ ಚಿಲಿಯ ಜನರು ಈ ಹಿಂದೆ ತಾಳಿದ್ದ ಹೆಮ್ಮೆ ಹುದುಗುತ್ತಿದೆ. ಈ ಚಳವಳಿಯು ಲ್ಯಾಟಿನ್ ಅಮೆರಿಕದ ಲೈಂಗಿಕ ಹಿಂಸಾಚಾರದ ವಿರುದ್ಧದ ಜಾಗತಿಕ 'ಮೀ ಟೂ' ಚಳವಳಿಯಿಂದ ಬಲ ಪಡೆದುಕೊಂಡಿದೆ. 2018ರ ಆರಂಭದಲ್ಲಿ ವಿಶ್ವವಿದ್ಯಾಲಯದ ಮುಷ್ಕರಗಳ ರಾಷ್ಟ್ರೀಯ ಅಲೆಯ ಸಂದರ್ಭದಲ್ಲಿ ಲೈಂಗಿಕ ಕಿರುಕುಳವನ್ನು ಪ್ರತಿಭಟಿಸಿದ ವಿದ್ಯಾರ್ಥಿನಿ ಮತ್ತು ಕಾರ್ಯಕರ್ತೆ ಕರೆನ್ ವರ್ಗಾರಾ ಸ್ಯಾಂಚೆಜ್, "ವಿಮಾನ ನಿಲ್ದಾಣವನ್ನು ಮರುನಾಮಕರಣ ಮಾಡಲು ಯಾವುದೇ ಸ್ಪಷ್ಟ ಕಾರಣವಿಲ್ಲ ಮತ್ತು ಮಹಿಳೆಯರು ತಮ್ಮ ಮೇಲಿನ ದೌರ್ಜನ್ಯವನ್ನು ಖಂಡಿಸಲು ಧೈರ್ಯ ಮಾಡುತ್ತಿರುವ ಸಮಯದಲ್ಲಿ ಇದು ನಡೆಯುತ್ತಿದೆ" ಎಂದು ಪ್ರತಿಭಟಿಸಿದ್ದನ್ನು 'ದಿ ಗಾರ್ಡಿಯನ್' ಪತ್ರಿಕೆಯು ಪ್ರಕಟಿಸಿತ್ತು.

ಸುಮಾರು ಐದು ದಶಕಗಳಷ್ಟು ಹಿಂದೆಯೇ ಇಂಗ್ಲಿಷ್ ಅನುವಾದದಲ್ಲಿ ಪ್ರಕಟವಾಗಿದ್ದ 'ನೆರೂಡ ನೆನಪುಗಳು' ಇಂದಿಗೂ ವಿಶ್ವದಾದ್ಯಂತ ಲಭ್ಯವಿದ್ದರೂ, ಓದುಗರಾಗಲಿ, ವಿಮರ್ಶಾತ್ಮಕರಾಗಲಿ ಮೇಲೆ ಉಲ್ಲೇಖಿಸಿದ ಕೃತ್ಯವನ್ನು ಒಂದು 'ರೇಪ್' ಎಂದು ಪರಿಗಣಿಸದೆ ಓದಿಕೊಂಡಿರುವುದರ ಹಿಂದಿನ ಅಜ್ಞಾನ, ಮೌಢ್ಯ ಅಥವಾ ಉಡಾಫೆ ಹಿಂದೆ ಕೆಲಸ ಮಾಡಿರುವುದು ಪ್ರೇಮಕವಿ, ಜನರ ಕವಿ ಎಂದೆಲ್ಲ ಹೆಸರಾಗಿದ್ದ ನೆರೂಡ ಸಮ್ಮೋಹನವೇ? ಅಥವಾ, ಸ್ಪ್ಯಾನಿಷ್ ಅಂತರ್ಯುದ್ಧದ ನಂತರ ಸಾವಿರಾರು ರಿಪಬ್ಲಿಕನ್ ನಿರಾಶ್ರಿತರು ಚಿಲಿಗೆ ಪಲಾಯನ ಮಾಡಲು ಸಹಾಯ ಮಾಡಿದ್ದರಿಂದಾಗಿ ಒದಗಿಬಂದ ಹೀರೋ ಪಟ್ಟವೇ? ಅಥವಾ ತಮ್ಮ ಕಾವ್ಯದ ಮೂಲಕ ಲೋಕಪ್ರಸಿದ್ಧರಾಗಿರಲು ಕಾರಣವಾಗಿರುವ ನೊಬೆಲ್ ಬಹುಮಾನವೇ? ಇಂತಹ ಕಾರಣಗಳಿಂದಾಗಿಯೇ, 'ಪಾಬ್ಲೊ ನೆರೂಡ ನೆನಪುಗಳು' ಹೊದಿಕೆ ಪುಟದ ಚಾಕುವಿನಲ್ಲಿ ಅವರನ್ನು ಹೀಗೆ ಹಾಡಿ ಹೊಗಳಲಾಗಿದೆ: "ಕವಿತೆಗಾಗಿಯೇ ನೊಬೆಲ್ ಸೇರಿದಂತೆ ಅನೇಕ ಪ್ರಶಸ್ತಿಗಳನ್ನೂ, ಅಪಾರ ಕಾವ್ಯಾಭಿಮಾನಿಗಳನ್ನೂ ಗಳಿಸಿದ, ಗಣಿಕಾರ್ಮಿಕರು, ಸರಕು ಮಾರ್ಕೆಟ್ಟಿನ ಹಮಾಲಿಗಳು, ಭೂಗತ ರೌಡಿಗಳು, ಕುರಿಕಾಯುವ ಹುಡುಗರಿಂದ ಹಿಡಿದು ಚೆಗೆವಾರ, ಪಿಕಾಸೊ, ಸ್ಟಾಲಿನ್ ತನಕ ಸಮಾಜದ ಎಲ್ಲ ಸ್ತರಗಳ ಜನರು ಅವನ ಕಾವ್ಯಾಭಿಮಾನಿಗಳಾಗಿದ್ದರು. ಬಹುಜನರಿಗಾಗಿ ಬರೆದ, ಬಾಳಿದ ಕವಿಯೆಂದೇ ಅವನ ಕವಿತೆಗಳು ಜನರ ಎದೆಯ ಹಾಡುಗಳಾಗಿ ಇಂದಿಗೂ ಜನಮನದಲ್ಲಿ ಸ್ಥಾಯಿಯಾಗಿವೆ." ಆದರೆ, ಮೇಲೆ ಹೇಳಿದ ಹಾಗೆ, ಅಚಲ ರಾಜಕೀಯ ಸೈದ್ಧಾಂತಿಕ ಬದ್ಧತೆಯನ್ನು ಹೊಂದಿದ ವ್ಯಕ್ತಿ ಕೂಡ ವೈಯುಕ್ತಿಕ ನೈತಿಕ ಬದ್ಧತೆಯ ಪ್ರಶ್ನೆ ಬಂದಾಗ ಭ್ರಷ್ಟನಾಗಿರಬಹುದು ಎಂಬ ಅರಿವು ನಮಗಿರಬೇಕು. ಆ ಅರಿವು ಉಳಿದವರನ್ನು ಎಚ್ಚರಿಸುವಂತಿರಬೇಕು. ಅಂತಹ ನಿಷ್ಠುರ ವಿಮರ್ಶಾಪ್ರಜ್ಞೆಯನ್ನು ಬೆಳೆಸಿಕೊಳ್ಳಬೇಕು. ಈ ಸಂದರ್ಭದಲ್ಲಿ ದಲಿತ ಸಂಘರ್ಷ ಸಮಿತಿಯ ಸಂಸ್ಥಾಪಕ ಬಿ. ಕೃಷ್ಣಪ್ಪನವರು ಹಲವು ದಶಕಗಳ ಹಿಂದೆ ತಮ್ಮ "ಕುವೆಂಪು ಕಾದಂಬರಿಗಳಲ್ಲಿ ದಲಿತ ಜೀವನಚಿತ್ರಣ" ಲೇಖನದಲ್ಲಿ ಎತ್ತಿದ್ದ, "ಶೋಷಣೆಯನ್ನು ಕುರಿತು ಬರೆಯುವ ಲೇಖಕರಿಗೆ ಶೋಷಣಾವ್ಯವಸ್ಥೆಯ ಬಗ್ಗೆ ಸ್ಪಷ್ಟ ಕಲ್ಪನೆಯೂ ನಿಚ್ಚಳ ಧೋರಣೆಯೂ ಇರಬೇಕಾದುದು ಅವಶ್ಯಕ. ಆದರೆ ಲೇಖಕರಿಗೆ ಅಂಥ ಧೋರಣೆ ಇಲ್ಲದೆ ಹೋದಾಗ ಅಥವಾ ಒಂದು ಮಟ್ಟದ ಶೋಷಣೆಯನ್ನು ಪ್ರತಿಭಟಿಸುವ ಲೇಖಕ ಮತ್ತೊಂದು ಮಟ್ಟದ ಶೋಷಣೆಯನ್ನು ವಿರೋಧಿಸದೆ ಹೋದಾಗ?" ಎಂಬ ಸಾರ್ವಕಾಲಿಕ ಪ್ರಶ್ನೆಯನ್ನು ಇನ್ನಾದರೂ ಪ್ರತಿಯೊಬ್ಬ ಲೇಖಕ, ವಿಮರ್ಶಕ, ಕಲಾವಿದರೂ ಮತ್ತೆಮತ್ತೆ ಕೇಳಿಕೊಳ್ಳುತ್ತ ಶೀಲ, ಅಶ್ಲೀಲಗಳ ವಿಶ್ಲೇಷಣೆಯನ್ನು ಮಾಡಬೇಕಾಗಿದೆ.

●